ಅಧ್ಯಕ್ಷರು:- ಮಾನ್ಯ ವಾಟಾಳ್‌ನಾಗರಾಜ್‌ರವರ ಪ್ರಶ್ನೆ ಸಂಖ್ಯೆ (60) 61(21)ಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಲು ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್:- ಅಧ್ಯಕ್ಷರೆ, ಸಮಯವೇಕೆ ಬೇಕು, ಮಾನ್ಯ ಉಪಮುಖ್ಯ ಮಂತ್ರಿಗಳು ವಿದೇಶಕ್ಕೆ ಹೋಗಿ ಬಂದಿದ್ದಾರೆ, ಯಾವ್ಯಾವ ಕಂಪನಿಗಳೆಂದು ಅವರಿಗೆ ಬಾಯಿಯಲ್ಲಿಯೇ ಇರುತ್ತದೆ. ಯಾವ್ಯಾವ ಕಂಪನಿಗಳ ಜೊತೆ ಏನೇನು ಒಪ್ಪಂದಗಳನ್ನು ಮಾಡಿಕೊಂಡು ಬಂದಿದ್ದೇವೆಂದು ಅವರಿಗೆ ಗೊತ್ತಿದೆ ಅವರಿಗೇಕೆ ಉತ್ತರವನ್ನು ಕೊಡಲು ಸಮಯ?

ಅಧ್ಯಕ್ಷರು :- ತಾವಿಬ್ಬರು ಮಾತನಾಡಿಕೊಳ್ಳುತ್ತಿರುವಾಗ ಈ ವಿಚಾರದ ಬಗ್ಗೆ ಒಪ್ಪಂದ ಮಾಡಿಕೊಂಡಿದ್ದಾರೆಂದಿದ್ದೆ.

ಶ್ರೀವಾಟಾಳ್‌ನಾಗರಾಜ್:- ತಮ್ಮ ಕೋಣೆಯಲ್ಲಿ ಅವರೊಂದಿಗೆ ಮಾತನಾಡುವಾಗ ವಿಚಾರದ ಬಗ್ಗೆ ಮಾತನಾಡಲಿಲ್ಲ.

ಅಧ್ಯಕ್ಷರು :- ದಯಮಾಡಿ ಕುಳಿತುಕೊಳ್ಳಿ. ಹಾಗೆಯೆ ಶ್ರೀ ಜಿ.ಟಿ. ಪಾಟೀಲರ ಪ್ರಶ್ನೆ ಸಂಖ್ಯೆ 62(508)ಗೆ ಸಹ ಸ್ವಲ್ಪ ಸಮಯವನ್ನು ಕೇಳಿದ್ದಾರೆ.

ವಿಷಯ:- ಶಿಕಾರಿಪುರ ತಾಲ್ಲೂಕು ಶಿರಾಳ ಕೊಪ್ಪದಲ್ಲಿ ಕುಡಿಯುವ ನೀರಿನ ಅಭಾವ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 63 (14)
ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

1. ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪಲದಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?
2. ನೀರಿನ ಅಭಾವವನ್ನು ತಪ್ಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು
ಶ್ರೀ. ಎಂ.ಪಿ. ಪ್ರಕಾಶ

1. ಬಂದಿದೆ.
2. ಶಿರಾಳಕೊಪ್ಪಲದಲ್ಲಿ ನೀರು ಸರಬರಾಜಿನ ಸ್ಥಿತಿಯನ್ನು ಉತ್ತಮಗೊಳಿಸಲು ಒಂದು ಸುಧಾರಣಾ ಯೋಜನೆಯನ್ನು 1993ರಲ್ಲಿಯೇ ಮಂಜೂರು ಮಾಡಲಾಗಿದೆ ಮತ್ತು ಕೆಲಸವು ಈಗ ಪ್ರಗತಿಯಲ್ಲಿದೆ.

ಶ್ರೀಬಿ.ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ ''ಶಿರಾಳಕೊಪ್ಪ''ದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಹಿಂದೆ ಸಚಿವರಾಗಿದ್ದ ಮಾನ್ಯ ಘೋರ್ಪಡೆಯವರು ಅದನ್ನು ಉದ್ಘಾಟನೆ ಮಾಡಿ ಹೋಗಿದ್ದರು. ಒಂದು ವರ್ಷವಾಗಿದೆ. ಸ್ವಲ್ಪ ಎಸ್ಟಿಮೇಟ್ ರಿವೈಸ್ ಆಗಿರುವುದರಿಂದ ಕಾಸ್ಟ್ ಜಾಸ್ತಿಯಾಗಿದೆ. ಮಾರ್ಚ್ 31ರೊಳಗೆ ಅದಕ್ಕೆ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭ ಮಾಡಿಸುತ್ತೀರೋ?

ಶ್ರೀ. ಎಂ.ಪಿ. ಪ್ರಕಾಶ ಸನ್ಮಾನ್ಯ ಅಧ್ಯಕ್ಷರೆ, ''ಶಿರಾಳಕೊಪ್ಪ''ದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಅಲ್ಲಿನ 12 ಕೊಳಚೆ ಬಾವಿಗಳಲ್ಲಿ 70 ಲೀಟರ್‌ನಷ್ಟು ನೀರನ್ನು ಪ್ರತಿಶತ ಪ್ರತಿಯೊಬ್ಬ ವ್ಯಕ್ತಿಗೂ ಕೊಡಬೇಕು ಎನ್ನ ತಕ್ಕ ಕಾರಣದಿಂದ ಅದು ಪುನರ್ ವಿರ್ಮಶಕ ಅಂದಾಜಿನ ಪ್ರಕಾರ 32 ಪ್ರಕಾರ 32 ಲಕ್ಷ ರೂಪಾಯಿಗಳಾಗಿದೆ. ಈಗಾಗಲೇ 11 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅದರ ಆಡಳಾತಾತ್ಮಕ ಮಂಜುರಾತಿ ಬರೆ ತಾಂತ್ರಿಕವಾದುದು, ಅದನ್ನು ಕೊಡುವುದರಲ್ಲಿ ಸ್ವಲ್ಪ ವಿಳಂಬವಾಗಿದೆ. ಪುನರ್‌ವಿರ್ಮಶಕ ಅಂದಾಜುಪಟ್ಟಿಯ ಕಾರಣಕ್ಕಾಗಿ ಅನುಮತಿಯನ್ನು ಕೊಡುವಲ್ಲಿ ವಿಳಂಬವಾಗಿದೆ. ಆದರೆ ಹಣವಿಲ್ಲವೆನ್ನ ತಕ್ಕ ಪ್ರಶ್ನೆಯಲ್ಲ, ಈಗಾಗಲೆ 11 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಉಳಿದಿರತಕ್ಕ 21 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆ.

ವಿಷಯ :- ಪುತ್ತೂರಿನ ಬೈಪಾಸ್ ರಸ್ತೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 64 (477)

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು):

ಮಾನ್ಯ : ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪುತ್ತೂರು ನಗರದ 'ಬೈಪಾಸ್' ರಸ್ತೆ ನಿರ್ಮಾಣದ ಅಂದಾಜು ವೆಚ್ಚ ಎಷ್ಟು:

ಆ) ಹಾಗೂ ಈ ಕಾಮಗಾರಿಯು ಪೂರ್ಣಗೊಳಿಸಲಾಯಿತೆ ಹಾಗಿಲ್ಲದಿದ್ದಲ್ಲಿ ಅದನ್ನು ಎಂದು ಮುಗಿಸಲಾಗುವುದು?

ಶ್ರೀ ಶಿವಾನಂದ ಎಚ್. ಕೌಜಲಗಿ
(ಲೋಕೋಪಯೋಗಿ ಸಚಿವರು).

ಅ) 85.00 ಲಕ್ಷ ರೂ.ಗಳು

ಆ) ಕಾಮಗಾರಿಯು ಪ್ರಗತಿಯಲ್ಲಿದೆ. ಕಾಮಗಾರಿಯನ್ನು ಕರಾರಿನಂತೆ 15-11-1996ರ ಒಳಗೆ ಪೂರ್ಣಗೊಳಿಸಬೇಕಿರುತ್ತದೆ. ಪ್ರಸಕ್ತ ಒಬ್ಬರು ಭೂಮಾಲಿಕರು ಭೂಸ್ವಾಧೀನ ಪರಿಹಾರದ